**ದಿಃ 05-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | - | ಸೋನು ಮಹಾಂತೇಶ ನಾಯಕ |
| ವಯಸ್ಸು | - | 21 ವರ್ಷ |
| ಉದ್ಯೋಗ | - | ಮನೆಕೆಲಸ |
| ಸಾಕೀನ | - | ಗೋಕಾಕ ಫಾಲ್ಸ್ |

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ;**

ದಿಃ 28-11-2022 ರಂದು ನನ್ನ ಹಾಗೂ ಎದುರುದಾರನ ವಿವಾಹವು ಗೋಕಾಕ ಫಾಲ್ಸನ ನಮ್ಮ ಮನೆಯ ಮುಂದೆ ಹಿರಿಯರ ಸಮ್ಮುಖದಲ್ಲಿ ನೆರವೇರಿತು. ನಂತರ ಒಂದು ವರ್ಷಗಳ ಕಾಲ ಎದುರುದಾರ ನನ್ನ ಜೊತೆ ಸರಿಯಾಗಿದ್ದು, ನಮ್ಮ ವೈವಾಹಿಕ ಜೀವನದಿಂದ 1 ನೇ ಅರ್ಜಿದಾರ ಜನಿಸಿದ್ದು, ನಾನು ನನ್ನ ಬಾಣಂತನ ಮುಗಿಸಿಕೊಂಡು ಎದುರುದಾರನ ಮನೆಗೆ ಮರಳಿ ಹೋದಾಗ ಅವರು ನನಗೆ ಕುಡಿದು ಬಂದು ಹೊಡಿಬಡಿ ಮಾಡುತ್ತಿದ್ದರು ಮತ್ತು ನನ್ನ ಮೇಲೆ ಸಂಶಯ ಪಡುತ್ತಿದ್ದರು. ಅಲ್ಲದೇ ನನ್ನ ಪತಿಯ ತಾಯಿ, ಅಕ್ಕ ಮತ್ತು ಅವರ ಅಜ್ಜಿ ಸಹ ನನಗೆ ತೊಂದರೆ ಕೊಡುತ್ತಿದ್ದರು. ನಂತರ ನಾನು ಹಿರಿಯರನ್ನು ಸೇರಿಸಿ ಎದುರುದಾರನಿಗೆ ಬುದ್ದಿವಾದ ಹೇಳಿಸಿ ಅವರ ಮನೆಗೆ ಹೋದರೂ ಸಹ ಅವರು ಸರಿ ಹೋಗಲಿಲ್ಲ ಮತ್ತು ನನಗೆ ನನ್ನ ತವರು ಮನೆಯವರೊಂದಿಗೆ ಮಾತನಾಡಬಾರದೆಂದು ನಿರ್ಬಂಧ ಹೇರುತ್ತಿದ್ದರು. ನನ್ನನ್ನು ಹಾಗೂ 1 ನೇ ಅರ್ಜಿದಾರನನ್ನು ಮನೆಯಿಂದ ಆಚೆ ಹಾಕಿದ್ದು, ನಾನು ನನ್ನ ತಾಯಿಯ ಮನೆಯ ಪಕ್ಕದಲ್ಲಿಯೇ ಬಾಡಿಗೆ ಮನೆ ಮಾಡಿಕೊಂಡು 1 ನೇ ಅರ್ಜಿದಾರನನ್ನು ನೋಡಿಕೊಂಡು ಜೀವನ ಸಾಗಿಸುತ್ತಿದ್ದೇನೆ.

2) ನಾನು ಸಾಧ್ಯವಾದಾಗ ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದು, ನನಗೆ ನನ್ನನ್ನು ಹಾಗೂ 1 ನೇ ಅರ್ಜಿದಾರನನ್ನು ನೋಡಿಕೊಳ್ಳಲು ಆಗುತ್ತಿಲ್ಲ ಮತ್ತು ನನಗೆ ಹಾಗೂ 1 ನೇ ಅರ್ಜಿದಾರನಿಗೆ ಸೇರಿ ಪ್ರತಿ ತಿಂಗಳು ತಲಾ ರೂ. 6,000/- ಗಳ ಅವಶ್ಯಕತೆ ಇದ್ದು, ಎದುರುದಾರನಿಗೆ 3 ಎಕರೆ ಜಮೀನಿದ್ದು ಅದರಿಂದ ವರ್ಷಕ್ಕೆ ರೂ. 3 ರಿಂದ 4 ಲಕ್ಷ ಆದಾಯವಿದ್ದು, ಅವರಿಗೆ ತಿಂಗಳಿಗೆ ರೂ. 15,000/- ಸಂಬಳವಿದ್ದು ಆದರೂ ಸಹ ನನ್ನನ್ನು ಹಾಗೂ ನನ್ನ ಮಗನನ್ನು ನೋಡಿಕೊಳ್ಳದೇ ನಿರ್ಲಕ್ಷ ಮಾಡಿದ್ದು, ಆದ್ದರಿಂದ ಎದುರುದಾರರಿಂದ ನಮಗೆ ಒಟ್ಟು ತಿಂಗಳಿಗೆ ರೂ. 12,000/- ಗಳನ್ನು ನೀಡಲು ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಸಾಕ್ಷಿ ಈ ಕೆಳಗಿನ ದಾಖಲೆಗಳನ್ನು ಹಾಜರು ಪಡಿಸಿ ನಿಶಾನೆಗೊಳಿಸಿಕೊಂಡಿರುತ್ತೇನೆ.

ನಿಪಿ-1: ವಿವಾಹ ಆಮಂತ್ರಣ ಪತ್ರಿಕೆ

ನಿಪಿ-2: ವಿವಾಹ ಛಾಯಾಚಿತ್ರ

ನಿಪಿ-3 ಮತ್ತು ನಿಪಿ-4 : ಪಹಣಿ ಪತ್ರಿಕೆಗಳು

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಿ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ.